

ಸುತ್ತಮುತ್ತ ಗಿಡ ಮರಗಳಿಲ್ಲದ ಬರಡು ಭೂಮಿ, ದೂರದಲ್ಲಿ ಮಸುಕಾಗಿ ಕಾಣುವ ಹಿಮ ಮುಸುಕಿದ ಪರ್ವತ ಸಾಲುಗಳು. ಹುಡುಕಿದರೂ ಮನುಷ್ಯರು ಗೋಚರಿಸದ ನಿರ್ಜನ ಪ್ರದೇಶ. ಆಗೊಮ್ಮೆ ಈಗೊಮ್ಮೆ ಎದುರುದಿಕ್ಕಿನಿಂದ ಶರವೇಗದಲ್ಲಿ ನಮ್ಮನ್ನು ಹಾದುಹೋಗುವ ವಾಹನಗಳು, ಇದು ಡೆತ್ ವ್ಯಾಲಿಗೆ ಹೋಗುವ ಮಾರ್ಗದಲ್ಲಿ ಕಂಡುಬಂದ ಚಿತ್ರಣ. ಬೆಟ್ಟ ಗುಡ್ಡ, ಕಣಿವೆ, ಮರಳು ದಿಬ್ಬ, ಓಯಸಿಸ್, ಕ್ರೇಟರ್‌ಗಳನ್ನು ಒಳಗೊಂಡ ವೈವಿಧ್ಯಮಯ ಭೂಪ್ರದೇಶ ಡೆತ್ ವ್ಯಾಲಿ. ಈ ಪ್ರದೇಶಕ್ಕೆ ಡೆತ್ ವ್ಯಾಲಿ ಹೆಸರು ಬರಲು ಒಂದು ಕಥೆಯಿದೆ. 1849ರಲ್ಲಿ, ಹತ್ತಿರದ ಮಾರ್ಗದಲ್ಲಿ ಕ್ಯಾಲಿಫೋರ್ನಿಯಾ ತಲುಪಲು, ಚಿನ್ನದ ಅನ್ವೇಷಣೆಗೆ ಹೊರಟ ಕೆಲವು ಯೂರೋಪಿಯನ್ ಅಮೆರಿಕನ್ನರು ಈ ಹಾದಿ ಹಿಡಿದರಂತೆ. ಆ ಮಂದಿ ಕಣಿವೆಯಲ್ಲಿ ಸಿಕ್ಕಿಕೊಂಡು ದಿಕ್ಕುಕಾಣದೆ ದಾರಿ ತೋಚದೆ 'ನಮ್ಮ ಕಥೆ ಮುಗೀತು' ಅಂತ ನರಳಿದರಂತೆ. ಹೇಗೋ ಸಾಹಸ ಮಾಡಿ ಅಲ್ಲಿಂದ ಹೊರಬರಲು ಸಾಧ್ಯವಾಯಿತಂತೆ. ಆಗ ಅವರು ಈ ಪ್ರದೇಶಕ್ಕೆ 'ಡೆತ್ ವ್ಯಾಲಿ' ಎಂದು ನಾಮಕರಣ ಮಾಡಿದರಂತೆ.

ಸ್ವಂತ ಕಾರ್, ಮೌಂಟನ್ ಬೈಕ್, ಬೈಸಿಕಲ್, ಹೈಕಿಂಗ್ ಮೂಲಕ ಈ ಪ್ರದೇಶದ ಅನ್ವೇಷಣೆ ಮಾಡಬಹುದು. ಕ್ಯಾಂಪಿಂಗ್ ಮಾಡಲು ಸೌಲಭ್ಯವಿದೆ. ಅಕ್ಟೋಬರ್‌ನಿಂದ ಮೇ ತಿಂಗಳವರೆಗೆ ಪ್ರವಾಸಿಗರಿಗೆ ಉತ್ತಮ ಸಮಯ. ಬೇಸಿಗೆಯ ಪೀಕ್‌ನಲ್ಲಿ ಗಟ್ಟಿಮುಟ್ಟಾಗಿರುವ ತರುಣರು, ಸಾಹಸಿಗರು ಮಾತ್ರ ಡೆತ್ ವ್ಯಾಲಿ ವೀಕ್ಷಿಸಲು ಇಷ್ಟಪಡುತ್ತಾರೆ. ಮಕ್ಕಳು, ಹಿರಿಯರು ಜೊತೆಯಲ್ಲಿ ಇದ್ದರೆ ಬೇಸಿಗೆಯಲ್ಲಿ ಹೋಗದಿರುವುದೇ ಒಳ್ಳೆಯದು. ಸನ್ ಸ್ಟ್ರೋಕ್ ಆಗದಂತೆ ನಮ್ಮನ್ನು ಕಾಪಾಡಿಕೊಳ್ಳಲು, ತಲೆಯ ರಕ್ಷಣೆಗೆ ಟೋಪಿ, ಕಣ್ಣುಗಳಿಗೆ ತಂಪು ಕನ್ನಡಕ, ಚರ್ಮದ ಸುರಕ್ಷತೆಗೆ ಮಾಯಿಶ್ಚರೈಸರ್ ಹಾಗೂ ಕೊಡೆ ಇದ್ದರೆ, ಡೆತ್ ವ್ಯಾಲಿ ಕಡಿಮೆ ಭಯಾನಕ.

ಹೈಕಿಂಗ್ ಟ್ರೈಲ್‌ಗಳು ಅಲ್ಲಿ ಬೇಕಾದಷ್ಟಿವೆ. ಆ ಟ್ರೈಲ್‌ಗಳನ್ನು ಸುಲಭ, ಮಧ್ಯಮ ಮತ್ತು ಅತಿ ಕಠಿಣ ಎಂದು ವರ್ಗೀಕರಿಸಲಾಗಿದೆ. ನಮ್ಮ ಶಕ್ತಿಗೆ ಅನುಸಾರವಾಗಿ, ಟ್ರೈಲ್ ಆಯ್ಕೆ ಮಾಡಿಕೊಳ್ಳಬೇಕು.

ಅಮೆರಿಕದ ಅತಿ ಕತ್ತಲು ಆಕಾಶ ಡೆತ್ ವ್ಯಾಲಿಯಲ್ಲಿ ಕಾಣಸಿಗುತ್ತದೆ. ಈ ಪ್ರದೇಶದಲ್ಲಿರುವ ಜ್ವಾಲಾಮುಖಿ ಸ್ಫೋಟದಿಂದ ರೂಪುಗೊಂಡ 'ಯುಬೀ ಹೀಬೀ ಕ್ರೇಟರ್' ನಕ್ಷತ್ರವೀಕ್ಷಣೆಗೆ ಪ್ರಶಸ್ತ ತಾಣ. ಸಮೀಪದ ಲಾಸ್ ವೆಗಾಸ್‌ನಿಂದ ಸ್ವಲ್ಪ ಬೆಳಕಿನ ಮಾಲಿನ್ಯ ಕಂಡುಬರುವುದು ಆಕಾಶದ ವೀಕ್ಷಕರಿಗೆ ಬೇಸರದ ವಿಷಯ. ಒಂದು ಕಿ.ಮೀ. ಅಗಲವಿರುವ ಈ ಕ್ರೇಟರ್‌ನ ತಳಭಾಗದವರೆಗೂ ಹಾಗೂ ಕ್ರೇಟರ್ ಕಂಠದ ಸುತ್ತಲೂ ಟ್ರೈಲ್ ಮಾಡಲು ಅನುಕೂಲ ಇದೆ.

ಹತ್ತಿರದ ಹಳ್ಳಿಯೆಂದರೆ ಫರ್ನೇಸ್ ಕ್ರೀಕ್. ಆ ಹಳ್ಳಿಯಲ್ಲಿ ತಂಗಲು ಹೋಟೆಲ್, ರೆಸ್ಟೋರಾಗಳು ಹಾಗೂ ಪಯಣಿಗರಿಗೆ ಅವಶ್ಯಕತೆಯಿರುವ ವಸ್ತುಗಳು, ಮೊಮೆಂಟೋಗಳು ದಾಸ್ತಾನಿರುವ ಅಂಗಡಿಗಳ ಅನುಕೂಲ ಇದೆ. ಹೈವೇ ಪಾಯಿಂಟ್‌ನಿಂದ ಬೆಟ್ಟ ಸಾಲಿನ ತಪ್ಪಲಿನಲ್ಲಿ ಒಂಬತ್ತು ಮೈಲಿ ಇಳಿಜಾರು ರಸ್ತೆಯಲ್ಲಿ ಪಯಣಿಸಿದರೆ 'ಬ್ಯಾಡ್ ವಾಟರ್ ಬೇಸಿನ್' ತಲುಪುತ್ತೇವೆ. ಅದು 200 ಚದರ ಮೈಲಿ ವಿಸ್ತಾರದ, ಸಮುದ್ರಮಟ್ಟಕ್ಕಿಂತ 85 ಮೀಟರ್ ಕೆಳಮಟ್ಟದಲ್ಲಿರುವ ಉಪ್ಪಿನಿಂದ ಆವೃತ್ತವಾದ ಶ್ವೇತವರ್ಣದ ಬೋಗುಣಿ. ದೂರದಿಂದ ನೋಡಿದರೆ ಹಿಮಪಾತವಾಗಿರಬಹುದೇ ಎಂಬ ಭಾವನೆ ಬರುತ್ತದೆ. ವಸಂತ ಕಾಲದಲ್ಲಿ ಸುತ್ತಮುತ್ತಲಿನ ಗಿರಿಶಿಖರಗಳ ಹಿಮದ ಕರಗುವಿಕೆಯಿಂದ ನೀರು ಶೇಖರಣೆಯಾಗಿ ತಾತ್ಕಾಲಿಕ ಕೊಳ ನಿರ್ಮಾಣವಾಗುತ್ತದೆ. ಕಾಲಾನುಕಾಲದಿಂದ ಆ ನೀರು ಆವಿಯಾಗಿ ಈ ತಾಣ ಉಪ್ಪುಮಯವಾಗಿದೆ. ತಾತ್ಕಾಲಿಕ ಕೊಳದ ನೀರು ಕಡು ಉಪ್ಪುಮಯವಾಗಿದ್ದು ಬಾಯಿಗೆ ತಾಕಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಈ ಜಾಗಕ್ಕೆ 'ಬ್ಯಾಡ್ ವಾಟರ್ ಬೇಸಿನ್' ಎನ್ನುವ ಹೆಸರು.

ಕಾರ್ ಪಾರ್ಕಿಂಗ್ ಪಾಯಿಂಟ್‌ನಿಂದ ಅರ್ಧ ಕಿ.ಮೀ.ನಷ್ಟು ಬೋಗುಣಿ ಒಳಗಡೆ ಹೋಗಿ ಸುತ್ತಾಡಿಕೊಂಡು ಕಣ್ಣುಚಾಚುವಷ್ಟು ಕಾಣುವ ಉಪ್ಪಿನ ಹಾಸಿಗೆಯನ್ನು ವೀಕ್ಷಿಸಿ ಬಂದೆವು. ತಾಪಮಾನ ಪ್ರಖರತೆಗೆ ಕೆಲವೇ ಕ್ಷಣದಲ್ಲಿ ಬೆವರು ಹರಿದು ಬಳಲಿಕೆಯಿಂದ ಬೆಂಡಾದೆವು. ನೀರಿನ ಬಾಟಲಿ ಜೊತೆಯಲ್ಲಿ ಒಯ್ಯುವುದನ್ನು ಮರೆತಿರಲಿಲ್ಲ. ಫರ್ನೇಸ್ ಕ್ರೀಕ್ ಹಳ್ಳಿಯಿಂದ ಕೇವಲ 5 ಮೈಲಿ ಅಂತರದಲ್ಲಿರುವ ಝಬ್ರಿಸ್ಕಿ ಬಿಂದುವಿನಿಂದ ವಿಹಂಗಮ ನೋಟ, ಅರುಣೋದಯ ವೀಕ್ಷಣೆ ಅವಿಸ್ಮರಣೀಯ ಅನುಭವ.

ಡೆತ್ ವ್ಯಾಲಿ ನಮ್ಮನ್ನು ಸುಸ್ತು ಮಾಡಿ ಬೆವರಿಳಿಸಿದರೂ ರುದ್ರ ಭೀಕರ ಸ್ಥಳವೊಂದನ್ನು ನೋಡಿದ ಸಂತೃಪ್ತಿ ನಮ್ಮದಾಗಿತ್ತು.

ಪ್ರತಿಕ್ರಿಯಿಸಿ: **feedback@sudha.co.in**

ಡೆತ್ ವ್ಯಾಲಿ ಪರಿಸರದಲ್ಲಿ ಲೇಖಕರು

